## ಪ್ರಧಾನ  ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

**ಸಿ.ಸಿ.117/2023**

ಸಾಕ್ಷಿದಾರರ ಹೇಳಿಕೆಃ

| | | | |
|---|---|---|---|
| **ಹೆಸರು** | : | ಹನುಮಂತಪ್ಪ | ಚಾಸಾಃ **6** ಫ್ರಾಸಾಃ **3** |
| **ತಂದೆಯ ಹೆಸರು** | : | ಮುದ್ದಪ್ಪ | |
| **ವಯಸ್ಸು** | : | **56** ವರ್ಷ | |
| **ವೃತ್ತಿ** | : | ವೈದ್ಯಾಧಿಕಾರಿಗಳು | |
| **ವಾಸಸ್ಥಳ** | : | ಹೊನ್ನಾಳಿ | |

ದಿನಾಂಕಃ **10-02-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-</u>

ನಾನು ಡಿಸೆಂಬರ್ 2015 ರಿಂದ ಇಲ್ಲಿಯವರೆಗೂ ಹೊನ್ನಾಳಿಯ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 25-03-2022 ರಂದು ಮದ್ಯಾಹ್ನ 01-10 ಗಂಟೆ ಸಮಯದಲ್ಲಿ ಚಾಸಾ-4 ರವರು ಹಲ್ಲೆಯ ಇತಿಹಾಸದಲ್ಲಿ ಚಿಕಿತ್ಸೆ ಪಡೆಯಲು ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಬಂದಿದ್ದು, ನಾನು ಅವರನ್ನು ಪರೀಕ್ಷಿಸಿದಾಗ ಅವರಿಗೆ ಈ ಕೆಳಕಂಡ ಗಾಯಗಳಾಗಿದ್ದವು.

1. ಮೂಗಿನ ಮೇಲ್ಭಾಗದಲ್ಲಿ ನೋವು
2. 1  x 1 ಸೆ.ಮೀ. ನ ಎಡಗೈ ನ ಮೊಣಕೈನಲ್ಲಿ  ತರಚಿದ ಗಾಯ
3. ಬೆನ್ನಿನ ಹಿಂಭಾಗ ನೋವು
4. ಭುಜದ ಮೇಲ್ಭಾಗ ನೋವು.

ಸದರಿ  ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳೆಂದು ಅಭಿಪ್ರಾಯ ಪಟ್ಟಿರುತ್ತೇನೆ . ಈ ಬಗ್ಗೆ

ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ.

ಗಾಯದ ಪ್ರಮಾಣ ಪತ್ರವನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಗಾಯದ ಪ್ರಮಾಣ ಪತ್ರವನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮು.ಮಾ.1 ರಿಂದ ಮತ್ತು ಕೈ ಗಳಿಂದ ಹೊಡೆದರೆ ಚಾಸಾ-4 ರವರಿಗೆ ಆಗಿರುವ ನೋವು ಆಗುವ ಸಾಧ್ಯತೆ ಇದೆ ಎಂದರೆ ಸರಿ.

<u>ಪಾಟೀ ಸವಾಲು:- ಆರೋಪಿ ಪರ ವಕೀಲರಿಂದ:-</u>

ಸಾಕ್ಷಿಗೆ ನಿಪಿ-9 ರಲ್ಲಿ ನಮೂದಾಗಿರುವ 1, 3 ಮತ್ತು 4 ಗಾಯಗಳು ಚಾಸಾ-4 ರವರನ್ನು ಮುಟ್ಟಿ ಪರೀಕ್ಷೆ ಮಾಡಿದಾಗ ಅವರು ಹೇಳಿದ ಮೇರೆಗೆ ನಮೂದು ಮಾಡಿದ್ದೀರಿ ಎಂದರೆ ಸಾಕ್ಷಿಯು ಅವರು ಹೇಳಿದ ಮೇರೆಗೆ ಮತ್ತು ಅವರನ್ನು ನಾನು ಮುಟ್ಟಿದಾಗ ಅವರಿಗೆ ನೋವು ಆದ ಅವಿವ್ಯಕ್ತವನ್ನು  ನಾನು ವೀಕ್ಷಣೆ ಮಾಡಿದ ಮೇರೆಗೆ ನಮೂದು ಮಾಡಿದ್ದೇನೆ ಎಂದು ನುಡಿಯುತ್ತಾರೆ. ಚಾಸಾ-4  ರವರು 1, 3 ಮತ್ತು 4 ನೋವುಗಳು ಆಗದಿದ್ದರೂ ಸಹ ಆಗಿದೆ ಎಂದು ನಟಿಸಿ ಹೇಳುವ ಸಾಧ್ಯತೆ ಇದೆ ಎಂದರೆ ಸಾಕ್ಷಿಯು ಹೇಳಬಹುದು ಎಂದು ನುಡಿಯುತ್ತಾರೆ. ಚಾಸಾ-4 ರವರಿಗೆ ಆದಂತಹ ಗಾಯಗಳು ಒಬ್ಬ ವ್ಯಕ್ತಿಯು ಸಾಮಾನ್ಯವಾಗಿ ಗಟ್ಟಿಯಾದ ಪ್ರದೇಶದಲ್ಲಿ ತಾನಾಗೇ ಬಿದ್ದರೆ ಆಗುವ ಸಾಧ್ಯತೆ ಇದೆ ಎಂದರೆ ಸರಿ. ಚಾಸಾ-4 ರವರಿಗೆ ನಿಪಿ-9 ರಲ್ಲಿ ನಮೂದಾಗಿರುವ ಗಾಯಗಳು ದಿಃ 24-03-2022 ರಂದು ಆಗಿರುವ ಸಾಧ್ಯತೆ ಇದೆ ಎಂದರೆ ಆಗಿರಬಹುದು ಎಂದು ನುಡಿಯುತ್ತಾರೆ.  ಚಾಸಾ-4 ರವರು ಅವರು ಹೆಸರು ಹೇಳಿದ ಮೇರೆಗೆ ನಿಪಿ-9 ರಲ್ಲಿ ನಮೂದು ಮಾಡಿರುತ್ತೇನೆ ಆದರೆ ಅವರು ಯಾವುದೇ ಗುರುತಿನ ಚೀಟಿಯನ್ನು ತೋರಿಸಿರುವುದಿಲ್ಲ. ನಮ್ಮ ಬಳಿ ಚಿಕಿತ್ಸೆಗೆ ಬಂದಿರುವ ವ್ಯಕ್ತಿಯು ಅವರು ನೀಡಿದ ಮಾಹಿತಿ ಮೇರೆಗೆ ನಾವು ನಮೂದು ಮಾಡಿರುತ್ತೇವೆ.

ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.